ಈಗ ಈ ಸಂಬಂಧದಲ್ಲಿ ಒಂದು ಸಮಿತಿಯು ರಚಿತವಾಗಿದೆ. ಈ ಸಮಿತಿಯ ದೃಷ್ಟಿಯಿಂದ ಒಂದು ಮಾತು. ಇದರ ಟರ್ಮ್ಸ್ ಆಫ್ ರೆಫರೆನ್ಸ್ ನೋಡಿದರೆ, ಗೆಜೆಟ್ಟನಲ್ಲಿ ಫಾಯಿಷ್ ಆಗಿರುವ ಆಜ್ಞೆಯನ್ನು ನೋಡಿದರೆ ಗ್ರಾಮಪಂಚಾಯಿತಿಗಳನ್ನೂ ಮತ್ತು ತಾಲ್ಲೂಕು ಬೋರ್ಡುಗಳನ್ನೂ ಸಮನ್ವಯ ಮಾಡುವ ಒಂದು ಹೊಸ ಅಚ್ಚುಕಟ್ಟನ್ನು ರಾಜ್ಯಾಂಗ ದೃಷ್ಟಿಯಿಂದ ಮಾಡಿ ಎಂದು ಹೇಳಬೇಕು. ಒಂದು ಪ್ರಧಾನವಾದ ಹೆಜ್ಜೆ, ಪ್ರಮುಖ ಹೆಜ್ಜೆ ಈ ಸರ್ಕಾರ ಇಟ್ಟಿದೆ ಎಂದು ನಿರೀಕ್ಷೆಯಿರುವ ಕಾಲದಲ್ಲಿ ಆಶಾಭಂಗ ವುಂಟಾಗಿದೆ. ಈ ದಿವಸ ನಾವು ಕೇಳುವುದು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟದ್ದು ಮಾತ್ರವಲ್ಲ, ಗ್ರಾಮ ಪಂಚಾಯಿತಿ ವಿಚಾರ ಸಹ; ಆದ್ದರಿಂದ ಸಮಿತಿವ್ಯಾಪ್ತಿ ಜಾಸ್ತಿಮಾಡಿಲ್ಲ. ಪಂಚಾಯಿತಿಯಿದೆ, ಅದಕ್ಕೂ ತಾಲ್ಲೂಕು ಬೋರ್ಡುಗಳಿಗೂ ಇರುವ ಸಂಬಂಧವನ್ನು ನೋಡಿ ಒಂದು ವರ್ಷದಲ್ಲಿ ಎಲ್ಲಕ್ಕೂ ಸರಿಹೋಗುವ, ಎಲ್ಲಕ್ಕೂ ಅನ್ವಯಿಸುವ ಒಂದು ವ್ಯವಸ್ಥೆಮಾಡಲಿ. ಅದನ್ನು ನಾವು ನೋಡೋಣ. ಈ ಮಧ್ಯ ಕಾಲದಲ್ಲಿ ಸರ್ಕಾರಿ ಅಧಿಕಾರಿಗಳ ಕೈಕೆಳಗೆ ಕೆಲಸಮಾಡಬೇಕೆಂದು ಹೇಳುವುದು ಬಹಳ ಆಶ್ಚರ್ಯಕರವಾಗಿದೆ. ಎರಡು ವರ್ಷಗಳಿಂದ ನುಮ್ಮನಿದ್ದ ಈಗ ಈ ಸರ್ಕಾರ ಇಂಥ ಮನೂದೆಗೆ ಒಪ್ಪಿಗೆ ಕೇಳುವುದು, ಯಾವುದೋ ಒಂದು ಭಯಭ್ರಾಂತಿಯಿಂದ ಡೆಪ್ಯುಟಿಕಮಿಷನರಿಗೆ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತ ವಹಿಸಬೇಕೆಂದು ಹೇಳುವುದು ಉಚಿತವೆ ಎಂಬುದನ್ನು ಯೋಚನೆಮಾಡಬೇಕಾಗಿದೆ. ಸ್ವತಂತ್ರ ದೇಶದಲ್ಲಿ ಒಂದು ದೃಷ್ಟಿಯಿಂದ ನೋಡುವುದಾದರೆ 20 ಲಕ್ಷ ರೂಪಾಯಿಗಳವರೆಗೂ ಆಡಳಿತ ನಡೆಸುವ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡನ್ನೂ ನಾಳೆಯದಿವಸ ಡೆಪ್ಯುಟಿಕಮಿಷನರ ಅಧಿಕಾರಕ್ಕೊಳಪಡಿಸಿದರೆ ಇದು ಮುಂದಾಲೋಚನೆಯಿಂದ ಮಾಡಿದ ಕೆಲಸವೆ, ಮುಂದೆ ನಮಗೆ ಕೀರ್ತಿ ತರುವುದೆ ಎಂಬುದು ಅರ್ಥವಾಗುವುದಿಲ್ಲ. ಹೀಗೆ ಅಧಿಕಾರ ಕೇಳುವುದು ವಿಚಿತ್ರವಾಗಿ ಕಾಣುತ್ತದೆ. ರಾಜಪ್ರಮುಖರ ಭಾಷಣದಲ್ಲಿ—

> "the present District Boards have been in existence for more than six years (and may therefore have lost their representative character....."

ಎಂದು ಹೇಳಿದ್ದಾರೆ.

ಅಂದರೆ, ಹಾಲಿ ಇರುವ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ರದ್ದುಗೊಳಿಸಿ ಈ ಕೆಲಸ ಕಾರ್ಯವನ್ನು ಶಾಸನೇತರ ಸದಸ್ಯರನ್ನೊಳಗೊಂಡ ಸಮಿತಿಯ ಸಹಾಯದಿಂದ ನಿರ್ವಹಿಸಬಲ್ಲ ಒಬ್ಬ ವಿಶೇಷಾಧಿಕಾರಿಗೆ ವಹಿಸಿದ ಮಾತ್ರಕ್ಕೆ, ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ, ಉತ್ತಮವಾಗಿ ಆಗುತ್ತವೆ ಎಂದು ಹೇಳಲು ಸಾಧ್ಯವೇ? ಈ ಪ್ರಶ್ನೆ ಈ ಮಂತ್ರಿಮಂಡಲದ ಒರೆಗಲ್ಲು. ಈ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಮಹಮದ್ ಇಮಾಂರವರು ತಿಳಿಸಿರುವುದನ್ನು ಅಕ್ಷರಶಃ ನಾನು ಒಪ್ಪುತ್ತೇನೆ. ದಯವಿಟ್ಟು ಸರ್ಕಾರದವರು ಈ ಅಂಶಗಳನ್ನು ಸಾವಧಾನದಿಂದ ಯೋಚಿಸಿ, ಈ ವಿಚಾರದಲ್ಲಿ ಪ್ರಜಾಭಿಪ್ರಾಯ ಯಾವ ಕಡೆಗಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಿ.

ನನ್ನ ಮನಸ್ಸಿನಲ್ಲಿ ಈ ವಿಚಾರದಲ್ಲಿ ಹೊಳೆದಿರುವ ಮತ್ತೊಂದು ಅಂಶವನ್ನು ನಾನು ಈ ದಿನ ಧೈರ್ಯವಾಗಿ ಹೇಳಿಬಿಡುತ್ತೇನೆ. ಇಷ್ಟೊಂದು ಮುಂದುವರಿದಿರುವ ಮೈಸೂರು ಸಂಸ್ಥಾನದಲ್ಲಿ, ಈ ಸುಧಾರಿತ ರಾಜ್ಯದಲ್ಲಿ, ಮಾನ್ಯ ಶಾಸನ ಸಭೆಗಳ ಏಕಾಭಿಪ್ರಾಯ ಪಡೆದು, ಅಂಗೀಕಾರ ಪಡೆದು ಶಾಸನ ಕಡತಕ್ಕೆ ಏರಿಸಿದ ಶಾಸನವನ್ನೇ ಇನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ಕೈಹಾಕದೆ, ಅಡ್ಡಿ ಆತಂಕಗಳನ್ನೇ ದೊಡ್ಡದನ್ನಾಗಿ ಮಾಡಿಕೊಂಡು, ಈ ವಿಚಾರದಲ್ಲಿ ಪರೋಕ್ಷ ಮಾರ್ಗವನ್ನು ಹಿಡಿಯಲು ತೊಡಗಿರುವ ಸರ್ಕಾರದ ಮಾರ್ಗ ನ್ಯಾಯವೇ, ಧರ್ಮವೇ ಮತ್ತು ರಾಜ್ಯಾಂಗ ದೃಷ್ಟಿಯಿಂದ ಅಂಗೀಕಾರಾರ್ಹವೇ ಎಂಬುದನ್ನು ತಾವೇ ಸಾವಧಾನವಾಗಿ ಅವಲೋಕಿಸಿ ನೋಡಿ. ಈ ಸಂದರ್ಭದಲ್ಲಿ ನಾನು ಇಂಗ್ಲೀಷ್ ಶಬ್ದವನ್ನುಪಯೋಗಿಸುವುದಾದರೆ, I charge the present Government with this. ಈ ಒಂದು ಪ್ರಬಲ ಆರೋಪಣೆಯನ್ನು ಮಾಡುತ್ತೇನೆ. ಶಾಸನವಾಗಿರ ತಕ್ಕಂಥದ್ದನ್ನು ಉಪಯೋಗಿಸಿಕೊಳ್ಳದೆ, ಕಾರ್ಯಗತ ಮಾಡದೆ, ಈ ರೀತಿ ಕಾಲಹರಣ ಮಾಡತಕ್ಕ ನೀತಿ ಧರ್ಮವೇ? ಸರ್ಕಾರದ ಈ ಮನೋಧರ್ಮ ಮಾನ್ಯ ಸಭೆಗೂ ಸಂಕಟವನ್ನುಂಟುಮಾಡಿದೆ.

ನಾನು ಈ ವಿಚಾರವಾಗಿ ಯಾರೊಬ್ಬರ ಪರ ವಕಾಲತ್ತು ವಹಿಸಿ ಮಾತನಾಡುತ್ತಿಲ್ಲ. ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಯಾವುದು ನನ್ನ ಮನಸ್ಸಿಗೆ ಸರಿಯೆಂದು ತೋರುತ್ತಿದೆಯೋ ಅದನ್ನು ಮನಬಿಚ್ಚಿ ಹೇಳುತ್ತಿದ್ದೇನೆ. ಇಂಥ ಒಂದು ಘನ ಸಭೆಯ ಅಂಗೀಕಾರ ಪಡೆದ ಶಾಸನದ ಬಗ್ಗೆ ನಾವೆಲ್ಲರೂ ಗೌರವ ಕೊಡುವಂತಿರಬೇಕು, ಹೆಮ್ಮೆ ಪಡುವಂತಿರಬೇಕು, ತಲೆ ಎತ್ತಿ

ಕೊಂಡು ತಿರುಗುವಂತಿರಬೇಕು. ಹೀಗಿಲ್ಲದೆ ಸರ್ಕಾರ ಇಂದು ಅನುಸರಿಸುತ್ತಿರುವ ಪ್ರಗತಿ ವಿರುದ್ಧ ಮಾರ್ಗವನ್ನು ನೋಡಿದರೆ ನನಗೆ ಆಶ್ಚರ್ಯವಾಗಿದೆ. ಈಗಾಗಲೇ ಶಾಸನ ಕಡತಕ್ಕೆ ಸೇರಿರುವ ಶಾಸನಕ್ಕೆ ಪುರಸ್ಕಾರ ಕೊಡಿ; ಅದನ್ನು ಮೂಲೆಗೆ ಒತ್ತರಿಸಿ ಅದಕ್ಕೊಂದು ಗುದ್ದಲಿ ಪೆಟ್ಟನ್ನು ಕೊಡಬೇಡಿ. ಆ ಶಾಸನವು ಪ್ರತಿನಿಧಿ ಸಭೆಯ ಅವಾಗಾಹನೆಗೆ ಒಳಗಾಗಿದ್ದು ಅಂಗೀಕಾರ ಪಡೆದಿದೆ; ಅದಕ್ಕೆ ತಕ್ಕ ಮಾನ್ಯತೆ ಲಭಿಸಬೇಕಾದುದು ಶ್ರೇಯಸ್ಕರವಾದುದು. ತಾವು ಈ ವಿಚಾರವನ್ನು ಸಮಿತಿಯ ಪರಿಶೀಲನೆಗೆ ಒಳಪಡಿಸುವುದರಲ್ಲಿ ತಮಗೇನೋ ಸದುದ್ದೇಶವೇ ಇರಬಹುದು. ಆದರೆ ತೊಡಕಿನ ಪ್ರಸಂಗ ಬಂದಾಗ ಸರ್ಕಾರ ವಿಚಾರ ವಿನಿಮಯಕ್ಕಾಗಿ ಸಮಿತಿಯೊಂದಕ್ಕೆ ಹಾಕಿಬಿಡುತ್ತದೆ ಎಂಬ ಅಪಹಾಸ್ಯಕ್ಕೆ ಈಡಾಗುವ ಪ್ರಸಂಗ ಈ ನಮ್ಮ ಸರ್ಕಾರಕ್ಕೆ ಒದಗಬಾರದು ಎಂಬುದೇ ನನ್ನ ಇಚ್ಛೆ. ಅಷ್ಟೇ ಅಲ್ಲದೆ, ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ರದ್ದುಗೊಳಿಸಿ ಅಧಿಕಾರ ವ್ಯಾಪ್ತಿಯನ್ನು ಒಬ್ಬ ಸ್ಪೆಷಲ್ ಆಫೀಸರ್, ಡೆಪ್ಯುಟಿ ಕಮಿಷನರ್ ದರ್ಜೆಯ ಆಫೀಸರಿಗೆ ವಹಿಸಿದರೆ ತಾವು ಈ ಸ್ಥಳೀಯ ಸಂಸ್ಥೆಗಳ ವ್ಯವಸ್ಥಿತ ಆಡಳಿತಕ್ಕೇ ತಿಲತರ್ಪಣ ಕೊಟ್ಟಂತಾಗುತ್ತದೆ. ಅದರಲ್ಲೂ ಈ ಒಬ್ಬ ಡೆಪ್ಯುಟಿ ಕಮಿಷನರ್ ದರ್ಜೆಯ ಅಧಿಕಾರಿಯು ಕೈಕೆಳಗೆ ಸಹಾಯಕವಾಗಿ ಕೆಲಸ ಮಾಡಲು ಈ ಮಾನ್ಯ ಸಭೆಯ ಕೆಲವು ಸದಸ್ಯರಿಂದ ಕೂಡಿದ ಸಮಿತಿಯೊಂದು 'Advisory Body' ಯಾಗಿ ಕೆಲಸ ಮಾಡವುದೆಂದರೆ ನಾಚಿಕೆಗೇಡು, ಅವಮಾನಕರ. ಆದುದರಿಂದ ಸರ್ಕಾರದವರು ಈ ವಿಚಾರವನ್ನು ಸಾವಧಾನ ಚಿತ್ತದಿಂದ ಯೋಚಿಸಿ. ತಮ್ಮ ಪಾರ್ಟಿಯ ಹಲವಾರು ಸದಸ್ಯರು ನನಗೂ ಚಿರ ಪರಿಚಿತರು. ನಾನೂ ಅವರ ಅಭಿಪ್ರಾಯವನ್ನು ಅರಿತಿದ್ದೇನೆ. ತಾವು ಈ ವಿಚಾರವನ್ನು ತಮ್ಮ ಪಾರ್ಟಿ ಸದಸ್ಯರಲ್ಲಿ ಪ್ರಸ್ತಾಪಿಸಿ ಇದನ್ನು ಇಷ್ಟು ಅತುರದಲ್ಲಿ ಮಾಡಿದೆ, ಯಾವ ರೀತಿ ಈಗಿರುವ ಮಸೂದೆಯನ್ನು ಸುಧಾರಿಸಬಹುದು, ಯಾವ ರೀತಿ ಅದನ್ನು ಪರಿವರ್ತನೆ ಮಾಡಿಕೊಳ್ಳಬಹುದು, ಯಾವ ರೀತಿ ಅದರಿಂದಲೇ ಉದ್ದೇಶ ಸಾಧನೆ ಆಗಬಹುದು, ಯಾರ ಗೌರವಕ್ಕೂ ಕುಂದುಂಟಾಗದೆ, ಮೂಲಭೂತ ತತ್ವಗಳಿಗೆ ಧಕ್ಕೆ ಬಾರದೆ, ಆಶಾದಾಯಕವಾದ ರೀತಿಯಲ್ಲಿ ಅದನ್ನು ಬದಲಾಯಿಸಿಕೊಳ್ಳಬಹುದು ಎಂಬುದನ್ನೆಲ್ಲಾ ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದೆಂದು ತಿಳಿಸಿ ನಾನು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಈಗಾಗಲೇ ವಿರೋಧ ಪಕ್ಷದ ಮಾನ್ಯ ಸದಸ್ಯರು ಕೆಲವರು ಈ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಸೂದೆ ಕಾಲಕ್ಕನುಗುಣವಾಗಿಲ್ಲ, ಸಮಯೋಚಿತವಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಮಯದಲ್ಲಿ ಒಂದು ವಿಚಾರವನ್ನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. 1947 ನೆಯ ಇಸವಿ ಆಗಸ್ಟ್ 15 ರಂದು ಹಿಂದೂ ದೇಶಕ್ಕೆ ಸ್ವರಾಜ್ಯ ಕೊಡಬೇಕೆಂಬ ಒಂದು ನಿರ್ದಿಷ್ಟ ದೃಷ್ಟಿಯಿಂದ ಇಂಗ್ಲೀಷರು ಇಲ್ಲಿ ಒಂದು Interim Government—ಮಧ್ಯವರ್ತಿ ಸರ್ಕಾರ ಸ್ಥಾಪಿಸಿದ ಮೇಲೆ ಅವರ ಆಡಳಿತವು ಪರಿಸಮಾಪ್ತಿಯಾಯಿತು. ಅಲ್ಲಿಂದೀಚೆಗೆ ಮಧ್ಯವರ್ತಿ ಸರ್ಕಾರವೇ ರಾಜ್ಯಾಂಗ ರಚನಾ ಸಭೆಯೊಂದನ್ನು ಏರ್ಪಡಿಸಿ ಹಿಂದೂ ದೇಶಕ್ಕೆ ಅಗತ್ಯವಾದ ಕಾನೂನುಗಳನ್ನು ಮಾಡಿದರು. ಅದೇ ರೀತಿ ಈಗ ಬದಲಾವಣೆ ಆಗಿರತಕ್ಕಂಥ ಜಿಲ್ಲಾ ಬೋರ್ಡ್ ಯಾವ ರೀತಿ ಇರಬೇಕು, ಜಿಲ್ಲಾ ಬೋರ್ಡ್ ಚುನಾವಣೆ ಯಾವ ಮಾದರಿಯಲ್ಲಿ ನಡೆಯಬೇಕು, ಈಗಿರತಕ್ಕ ಜಿಲ್ಲಾ ಬೋರ್ಡ್ ಸದಸ್ಯರು ಜನರ ಓಟುಗಳಿಸಿ ಚುನಾಯಿತರಾಗಿ ಬಂದಿರುತ್ತಾರೆಯೇ, ಇದೇ ಅವಕಾಶವನ್ನು ಕಲ್ಪಿಸಿಕೊಂಡು ಬರಬೇಕಾದದ್ದು ಅಗತ್ಯವೇ ಅಥವಾ ಅವರ ಸದಸ್ಯತ್ವವನ್ನು ಇಲ್ಲಿಗೆ ಪರಿಸಮಾಪ್ತಿಗೊಳಿಸಿ ನಿಯಮಿತವಾಗಲಿರುವ ಸ್ಥಳೀಯ ಸಂಸ್ಥೆಗಳಿಗೆ ಯಾವ ರೀತಿ ಚುನಾವಣೆ ನಡೆಯಬೇಕು ಎಂಬುದನ್ನೆಲ್ಲಾ ಯೋಚಿಸುವುದಕ್ಕೆ ಕಾಲಾವಕಾಶ ಬೇಕು. ಅಲ್ಲದೆ, ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುವ ಪ್ರಜಾ ಸಂಸ್ಥೆಗಳಿಸಿದ ಈ ಜಿಲ್ಲಾ ಬೋರ್ಡ್, ತಾಲ್ಲೂಕು ಬೋರ್ಡ್ ಹಾಗೂ ಗ್ರಾಮ ಪ್ರಂಚಾಯಿತಗಳಲ್ಲಿ ಸದಸ್ಯರನ್ನು ಚುನಾಯಿಸಲು ಯಾವ ರೀತಿ ಚುನಾವಣೆ ನಡೆಯಬೇಕು, ಈಗಿನ ಹೊಸ ವಾತಾವರಣದಲ್ಲಿ ಪ್ರತಿಯೊಬ್ಬ ಪ್ರಜೆಗೂ ಓಟಿನ ಹಕ್ಕಿರುವಾಗ ಅದನ್ನು ಯಾವ ರೀತಿ ಚಲಾಯಿಸಿದರೆ ಪ್ರಜಾಪ್ರಭುತ್ವ ಕ್ಕನುಗುಣವಾದ ಜಿಲ್ಲಾ ಬೋರ್ಡ್, ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳು ರಚನೆಯಾಗುತ್ತವೆ ಎಂಬ ಅಂಶವನ್ನು ತಿಳಿದುಕೊಳ್ಳತಕ್ಕದ್ದು ಮುಖ್ಯವಾದುದು.

ಈಗ ಹಾಲಿ ಇರತಕ್ಕ ಜಿಲ್ಲಾ ಬೋರ್ಡ್‌ಗಳ ವಿಚಾರವಾಗಿ ನೂಕ್ಷ್ಮವಾಗಿ ಒಂದೆರಡು ಅಂಶಗಳನ್ನು ತಿಳಿಸುತ್ತೇನೆ. ಹಿಂದೆ ಓಟಿನ ಹಕ್ಕನ್ನು ಪಡೆದಿರುವವರೆಂದರೆ ಆಸ್ತಿ ಪಾಸ್ತಿಯುಳ್ಳವರು, ಕಂದಾಯ ಕೊಡುತ್ತಿದ್ದವರು. ಇವರ ಓಟಿನ ಹಕ್ಕಿನ ಚಲಾವಣೆಯ ಮೇಲೆ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯತ್ವವನ್ನು ಪಡೆದುಕೊಳ್ಳುತ್ತಿದ್ದರು. ಈಗ ಎಲ್ಲದಕ್ಕೂ ವಯಸ್ಕರ ಮತದಾನ ಪದ್ಧತಿ ಜಾರಿಗೆ ಬಂದಿದೆ. ಇನ್ನು ಮುಂದೆ ಈ ಮಾನ್ಯ ಸಭೆಗೆ ಸದಸ್ಯರು ಚುನಾವಣೆಯಲ್ಲಿ ಯಾವ ರೀತಿಯಲ್ಲಿ ಓಟನ್ನು ಗಳಿಸಿದ್ದಾರೋ ಅದೇ ರೀತಿ ಜಿಲ್ಲಾ ಬೋರ್ಡಿಗೂ ಚುನಾವಣೆ ನಡೆಸಿ ಅಲ್ಲಿಗೆ ಚುನಾಯಿತ ಸದಸ್ಯರನ್ನು ಕಳುಹಿಸಬೇಕು. ಈಗ ಹಾಲಿ ಇರತಕ್ಕ ಜಿಲ್ಲಾ ಬೋರ್ಡ್ ಸದಸ್ಯರು ಎಷ್ಟರ ಮಟ್ಟಿಗೆ ಪ್ರಜಾ ಪ್ರಭುತ್ವ ತತ್ವವನ್ನು ಪ್ರತಿಪಾದಿಸುತ್ತಿದ್ದಾರೆಂಬುದನ್ನು ಯೋಚಿಸಿದರೆ, ಶ್ರೀ ಪಟ್ಟಾಭಿರಾಮರ್ ರವರು ಅವರ ಭಾಷಣದಲ್ಲಿ, ರಾಜಪ್ರಮುಖರ ಭಾಷಣದ ಒಂದು ವಾಕ್ಯವನ್ನು ಉಲ್ಲೇಖಿಸಿ ಹೇಳಿದಂತೆ,—ಅಂದರೆ 'they have lost their representative character' ಎಂಬುದು, ಅಕ್ಷರಶಃ ನಿಜ. ಈಗ ಆರು ವರ್ಷಗಳಿಂದಲೂ ಜಿಲ್ಲಾ ಬೋರ್ಡ್‌ಗಳು ಕೆಲಸ ಮಾಡುತ್ತಿವೆ. ಅವುಗಳ ಪೈಕಿ ಯಾವುದಾದರೂ ಇಂದು ಪ್ರಜಾಭಿಪ್ರಾಯವನ್ನು ಪ್ರತಿನಿಧಿಸುವ, ಪ್ರತಿಬಿಂಬಿಸುವ ವ್ಯಕ್ತಿತ್ವ ಪಡೆದಿದೆಯೇ ಎಂದು ನಾನು ಪ್ರಶ್ನೆ ಹಾಕಬೇಕಾಗಿದೆ. ಈ ಜಿಲ್ಲಾ ಬೋರ್ಡ್‌ಗಳು ಈಗಾಗಲೇ ಕಾಲಕ್ಕನುಗುಣವಾಗಿ ಬದಲಾವಣೆಹೊಂದಿ ಅನೇಕ ವರ್ಷಗಳಾಗಬೇಕಾಗಿತ್ತು. ಅಲ್ಲದೆ, ಈ ಜಿಲ್ಲಾ ಬೋರ್ಡ್‌ಗಳಿಗೆ ವಯಸ್ಕರ ಮತದಾನ ಪದ್ಧತಿಯ ಮೇರೆಗೆ ಚುನಾವಣೆ ನಡೆಯಬೇಕಾಗಿತ್ತು. ಈಗ ಹಾಲಿ ಇರುವ ಜಿಲ್ಲಾ ಬೋರ್ಡ್‌ಗಳು ಪ್ರಜಾ ಪ್ರಭುತ್ವ ತತ್ವಕ್ಕೆ ವಿರುದ್ಧವಾಗಿದ್ದು ಆ ನೀತಿಗೆ ಧಕ್ಕೆ ತಂದೊಡ್ಡಿದೆ. ರಾಜ್ಯಾಂಗದ ಪ್ರಕಾರ ನಾವು ಯಾವಾಗ ನೇರವಾದ ಓಟಿನ ಹಕ್ಕಿನ ಚುನಾವಣೆಯನ್ನು (Direct Election) ಒಪ್ಪಿಕೊಂಡಿದ್ದೇವೆಯೋ, ಇದಕ್ಕೆ ಸಂಬಂಧಿಸಿದ ಹಾಗೆ

(ಶ್ರೀ ಬಿ. ಟಿ. ಕೆಂಪರಾಜ್)

ಯಾವ ಅಂಶಗಳು ರಾಜ್ಯಾಂಗದಲ್ಲಿ ಉಲ್ಲೇಖಿತವಾಗಿ ವೆಯೋ ಅವುಗಳಿಗೆ ಈಗಿರುವ ಜಿಲ್ಲಾ ಬೋರ್ಡ್‌ಗಳು–ಪರೋಕ್ಷ ಚುನಾವಣೆಯ (Indirect Election) ಮೂಲಕ ಏರ್ಪಟ್ಟಿರುವ ಜಿಲ್ಲಾ ಬೋರ್ಡ್‌ಗಳು—ದಕ್ಕೆ ತಂದಿದೆ. ಈಗ ಸಭೆಯ ಮುಂದೆ ಮಂಡಿಸಿರುವ ಈ ತಿದ್ದುಪಡಿ ಮಸೂದೆಯು ಈ ಎಲ್ಲ ತೊಂದರೆಗಳ ಪರಿಹಾರಕ್ಕೆ ಸಮಯೋಚಿತವಾಗಿದೆ ಮತ್ತು ಸಮರ್ಪಕವಾಗಿದೆ. ಈ ಮಧ್ಯೆ ಸರ್ಕಾರದವರು ಇನ್ನು ಮುಂದೆ ಈ ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೂಕು ಬೋರ್ಡ್ ಕೆಲಸ ಕಾರ್ಯಗಳು ಯಾವ ರೀತಿ ನಡೆಯ ಬೇಕೆಂಬುದನ್ನು ತೀರ್ಮಾನಿಸಲು ಒಂದು ಸಮಿತಿಯನ್ನು ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ನೇತೃತ್ವದಲ್ಲಿ ರಚಿಸಿದ್ದಾರೆ. ಆ ಸಮಿತಿಯ ವರದಿ ಬರುವವರೆಗೆ ಈಗಿರುವ ಜಿಲ್ಲಾ ಬೋರ್ಡ್‌ಗಳು ಪರಿಸಮಾಪ್ತಿಗೊಳ್ಳುವುದು ಅಗತ್ಯ.

ಶ್ರೀ ಕೆ. ಪಟ್ಟಾಭಿರಾಮ್ಮರವರು ಅವರ ಭಾಷಣದಲ್ಲಿ ಮತ್ತೊಂದು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಡೆಪ್ಯುಟಿ ಕಮಿಷನರ ಕೈಕೆಳಗೆ ಒಂದು ಅಡ್ವೈಜರಿ ಸಮಿತಿಯನ್ನು ಏರ್ಪಡಿಸಿ ಆ ಸಮಿತಿಗೆ ಸದಸ್ಯರನ್ನಾಗಿ ಈ ಮಾನ್ಯ ಸಭೆಯ ಸದಸ್ಯರನ್ನು ಚುನಾಯಿಸಿರುವುದು ಅವಮಾನಕರವಲ್ಲವೇ ಎಂದು ಅವರು ತಿಳಿಸಿದ್ದಾರೆ. ಎಂದಿಗೂ ಅಲ್ಲ ಎಂದು ನಾನು ನಿರ್ಭಯವಾಗಿ ಹೇಳುತ್ತೇನೆ. ನಾವು ಈಗೆ ಇರುವುದು ಪ್ರಜಾ ಪ್ರಭುತ್ವ ಯುಗೆದಲ್ಲಿ. ಈಗಿನ ಸರ್ಕಾರ ಪ್ರಜಾ ಪ್ರಭುತ್ವ ಸರ್ಕಾರ. ಈಗಿನ ಜಿಲ್ಲಾಧಿಕಾರಿಗಳು ಈ ಹೊಸ ವಾತಾವರಣಕ್ಕೆ ಹೊಂದಿಕ್ಕೊಂಡು ಕಾರ್ಯ ಭಾರ ನಡೆಸುತ್ತಿದ್ದಾರೆ. ಆ ಅಧಿಕಾರಿಗಳು ನಮ್ಮವರು. ಅವರಿಗೆ ಈ ಸಭೆಯ ಮಾನ್ಯ ಸದಸ್ಯರು ಕೆಲವರು ಅಡ್ವೈಜರಿ ಸಮಿತಿಯಲ್ಲಿದ್ದುಕೊಂಡು ಅವರಿಗೆ ಸಲಹೆ ಕೊಡುತ್ತಾರೆ. ಈ ರೀತಿ ಸಲಹೆಗಳನ್ನು ಕೊಟ್ಟು ಜಿಲ್ಲಾಧಿಕಾರಿಗಳ ಮೂಲಕ ಕೆಲಸಕಾರ್ಯಗಳನ್ನು ಮಾಡಿಸುವುದರಲ್ಲಿ ಯಾವ ಅಭ್ಯಂತರವೂ ಬರಬಾರದು.

4-30 P.M.

ಇದರಿಂದ ಮಾನ್ಯ ಸದಸ್ಯರು ಆ ಸ್ಪೆಷಲ್ ಆಫೀಸರವರಲ್ಲಿ ತಮ್ಮ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟು, ಕೆಲಸಗಳನ್ನು ಮಾಡಿಸುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಹಾಲಿ ಈಗಿರತಕ್ಕ ಜಿಲ್ಲಾ ಬೋರ್ಡ್ ಅಧ್ಯಕ್ಷರು ಕೆಲವರಿಗೆ ಬಹಳ ನೋವಾಗಬಹುದು, heart-failure ಆಗುವುದರಲ್ಲಿ ಏನೂ ಸಂಶಯವಿಲ್ಲ. ಏಕೆಂದರೆ ಅವರು ಮಾಡತಕ್ಕ ಕೆಲಸಕಾರ್ಯಗಳು ಈ ಒಂದು ನಿರ್ಣಯ ಪಾಸ್ ಆದ ಕೂಡಲೇ ಮುಗಿದು ಹೋಗುತ್ತವೆ. ಅವರು ಯಾವ ರೀತಿ ಕೆಲಸ ಇಲ್ಲಿಯವರೆಗೂ ಮಾಡುತ್ತಾ ಇದ್ದರು, ಆ ಜಿಲ್ಲಾ ಬೋರ್ಡುಗಳಲ್ಲಿ ಅವರು ಎಷ್ಟು ದುಡ್ಡು ತಮ್ಮ ಸ್ವಾರ್ಥಕ್ಕೆ ಹಾಗೂ ಪ್ರಜೆಗಳಿಗೆ ಅನಾನುಕೂಲವಾದ ರೀತಿಯಲ್ಲಿ ಖರ್ಚು ಮಾಡಿಕೊಂಡು ಸ್ವೇಚ್ಛೆಯಿಂದ ವರ್ತಿಸುತ್ತಾ ಇದ್ದರು, ಅಂಥ ಸ್ವೇಚ್ಛಾ ವರ್ತನೆ ನಿಂತು ಹೋಗುತ್ತದೆಯಲ್ಲ, ತಮ್ಮ ದಬ್ಬಾಳಿಕೆಗೆ ಅವಕಾಶವಿಲ್ಲವಲ್ಲ ಎಂಬ ಒಂದು ವೇದನೆಯಿಂದ ಇಂಥ ಒಂದು ನಿರ್ಣಯವನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮಾನ್ಯ ಸದಸ್ಯರು ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರು ದುಡ್ಡು ತಿಂದರು ಎಂದು ನಿದರ್ಶನಗಳನ್ನು ಕೊಡದೇ ಹೇಳುವುದು ಅವಮಾನಕರ. He must withdraw.

ಶ್ರೀ ಬಿ. ಟಿ. ಕೆಂಪರಾಜ್.—ಸ್ವಾಮಿ, ನಾನು ಜಿಲ್ಲಾ ಬೋರ್ಡ್ ಅಧ್ಯಕ್ಷರು ದುಡ್ಡು ತಿಂದು ಹಾಕಿದ್ದಾರೆ ಎಂಬ ಸಂಶಯ ವ್ಯಕ್ತಪಡಿಸಲಲ್ಲ, ಸ್ವೇಚ್ಛೆಯಿಂದ ಖರ್ಚು ಮಾಡುತ್ತಾ ಇದ್ದಾರೆ ಎಂಬುದನ್ನು ಮಾತ್ರ ಒತ್ತಿ ಹೇಳಿದೆ.

Sri K. HANUMANTHAIYA (Leader of the House).—Sir, as Leader of the House I have to play my part. It is not right to say that the Presidents of the District Boards have acted in an arbitrary manner. After all, there is the District Board and there are the Members to control expenditure and vote expenditure. Therefore, I request my Hon'ble friend not to use such a strong language.

ಶ್ರೀ ಬಿ. ಟಿ. ಕೆಂಪರಾಜ್.—ಈಗ ಈ ಸಭೆಯ ಮುಂದೆ ಇಟ್ಟಿರತಕ ನಿರ್ಣಯ ಕಾಲಕ್ಕನುಗುಣವಾಗಿದೆ. ಆದ್ದರಿಂದ ಪ್ರಜಾಪ್ರಭುತ್ವದ ನಿಯಮವನ್ನು ಪಾಲನು ವುದಕ್ಕೂ, ಪ್ರಜಾಭಿಪ್ರಾಯಕ್ಕೆ ಬೆಂಬಲ ಕೊಡುವುದಕ್ಕೂ ಈ ನಿರ್ಣಯವನ್ನು ನಾವು ಸರ್ವಾನುಮತದಿಂದ ಅನುಮೋದಿಸಬೇಕೆಂದು ಹೇಳಿ ನನ್ನ ಅಭಿಪ್ರಾಯವನ್ನು ವ ಕ್ತಪಡಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಲ್ಪಟ್ಟಿರುವ Mysore Village Panchayets and District Boards (Amendment) Bill, 1954 ಇದನ್ನು ವಿರೋಧಿಸಿ ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಇತರರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ಕೂಡ ಈ ತಿದ್ದುಪಡಿ ಮಸೂದೆಯನ್ನು ತೀವ್ರವಾಗಿ ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರ ಬೇಕೆಂದಿದ್ದೇನೆ. ಈ ಅಮೆಂಡ್‌ಮೆಂಟ್‌ನಲ್ಲಿ ಏನು ಅಧಿಕಾರವನ್ನು ಸರ್ಕಾರ ಕೇಳುತ್ತಾ ಇದೆ ಎನ್ನುವ ದು ಬಹಳ ಮುಖ್ಯವಾದ ವಿಷಯ. ಅವರು ಕಾರಣಗಳನ್ನು ಹೇಳುವಾಗ ಈ ತಿದ್ದುಪಡಿ ಮಸೂದೆಯ ಕೊನೆಯಲ್ಲಿ ಈ ರೀತಿ ಹೇಳಿದ್ದಾರೆ: —

> "The District Boards now functioning are continuing pending the constitution of the District Boards as envisaged in the Mysore Village Panchayets and District Boards Act, 1952. The entire question of having District Boards or Taluk Boards in the alternative is being examined by a committee constituted for the purpose. As it is over six years ago that the present District Boards came into being, it is considered desirable to entrust their functions to a special officer pending a decision regarding the future of the District Boards. Hence this amending Bill."

ಎಂದು ಇದರಲ್ಲಿ ಕಾರಣಗಳನ್ನು ಶ್ರುತಪಡಿಸಿದ್ದಾರೆ. ನಿಜ. ಈಗ ಇರತಕ್ಕಂಥ ಜಿಲ್ಲಾ ಬೋರ್ಡ್‌ಗಳು ಮೃತ ವಾಗಿವೆ. ಅವು ಪುನರ್‌ರಚನೆ ಯಾಗಬೇಕು ಎಂದು ಹೇಳಿದೆ. ರಾಜಪ್ರಮುಖರ ಭಾಷಣದಲ್ಲಿ ಹೇಳಿರುವ ಹಾಗೆ ಅವು ತಮ್ಮ ಲಕ್ಷಣಗಳನ್ನು ಕಳೆದುಕೊಂಡಿವೆ. ಎಂದರೆ, ಕಾನೂನಿನ ರೀತಿಯಲ್ಲಿ ಹೇಳಬೇಕೆಂದರೆ, ಅವು ಇಲ್ಲ ಎಂದು ಭಾವಿಸಬೇಕಾಗಿದೆ ಎಂದು ಹೇಳಿದೆ. ಹಾಗಾದರೆ ಇಷ್ಟು ಕಾಲ ಈ ಸ್ಥಳೀಯ ಸಂಸ್ಥೆಗಳನ್ನು, ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ಮುಂದು ವರಿಸಿಕೊಂಡು ಬರುವುದಕ್ಕೆ ದೇಶದಲ್ಲಿ ಅಂಥ ಅರ್ಜೆಂಟ್ ಕರ್ಜೆಂಟ್ ಪರಿಸ್ಥಿತಿ ಏನಿತ್ತು ? ಮೇಲಾಗಿ ಈ ಜಿಲ್ಲಾ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳನ್ನು ಯಾವ ರೀತಿ ಪುನರ್‌ರಚಿಸಬೇಕು, ಇವುಗಳಿಗೆ ಯಾವ ರೀತಿ ಚುನಾವಣೆ ನಡೆಯಬೇಕು ಎಂಬ ಈ ಎಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಿ ಸರ್ಕಾರದವರಿಗೆ ವರದಿ ಒಪ್ಪಿಸುವ ಸಲುವಾಗಿ ಶ್ರೀ ವಿ. ವೆಂಕಟಪ್ಪ ನವರ ಕಮಿಟಿಯನ್ನು ರಚನೆಮಾಡಿ ಆ ಸಮಿತಿ ತನ್ನ ವರದಿಯನ್ನು ಕೊಟ್ಟು ಅದರ ಆಧಾರದಮೇಲೆ ಕಾನೂ ನೂ ಕೂಡ ಸಿದ್ಧವಾಗಿ ಜಾರಿಗೆ ತರದೇ ಇದ್ದು, ಅನಂತ ರದಲ್ಲಿ ಒಂದು ಕಾರಣಕೊಡುತ್ತಾ ಹೀಗೆಯೇ ಕಾಲಕಳೆ ಯುತ್ತಾ ಇದ್ದಾಗ ಚುನಾವಣೆ ಬಗ್ಗೆ ಭಿನ್ನಾಭಿ ಪ್ರಾಯ ಬಂತು. ಪ್ರತ್ಯಕ್ಷ ಚುನಾವಣೆ ನಡೆಯಬೇಕೇ, ಪರೋಕ್ಷ ಚುನಾವಣೆ ನಡೆಯಬೇಕೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂತು, ಹಾಗೆಯೇ ಮುಂದುವರಿ ಯುತ್ತಿರುವಾಗ ಈ ರೀತಿ ಜಿಲ್ಲಾ ಬೋರ್ಡ್‌ಗಳು ಇರ ಬೇಕೇ ಅಥವಾ ತಾಲ್ಲೂಕು ಬೋರ್ಡ್‌ಗಳು ಇರಬೇಕೇ ಎಂದು ಹೇಳಿ ಮತ್ತೆ ಭಿನ್ನಾಭಿಪ್ರಾಯ ಹೆಚ್ಚುಹೆಚ್ಚುತ್ತಾ ಬಂತು ಎಂದು ಕೂಡ ಹೇಳುತ್ತಾರೆ. ನಿಜ. ಅನೇಕ ವಿಷಯಗಳ ಬಗ್ಗೆ ದೇಶದಲ್ಲಿ ಪಾರ್ಟಿಗಳಲ್ಲಿ, ಜನರಲ್ಲಿ ಭಿನ್ನಾಭಿಪ್ರಾಯ ವಿರುವುದಕ್ಕೆ ಸಾಧ್ಯ, ಇರಬೇಕಾ ದದ್ದು ನ್ಯಾಯ. ಆದರೆ ಸ್ವರಾಜ್ಯ, ರಾಮರಾಜ್ಯ ಇತ್ಯಾದಿಯಾಗಿ ಜನತಾ ರಾಜ್ಯಗಳನ್ನು ನಾವು ಸ್ಥಾಪನೆ ಮಾಡುತ್ತೇವೆ, ಮಾಡಬೇಕಾದದ್ದು ಯುಗದ ಧರ್ಮ ಎಂದು ಒಪ್ಪಿಕೊಂಡೂ ಕೂಡ, ಈ ಒಂದು ಸ್ವರೂಪದಲ್ಲಿ ಯಾವ ಒಂದು 'ಲೋಕಲ್ ಸೆಲ್ಫ್ ಗವರ್ನ್‌ಮೆಂಟ್' ಎಂದು ಇಟ್ಟುಕೊಂಡು ಬಂದಿದ್ದೇವೋ ಅದನ್ನು ಈ ರೀತಿ ಜೀವಚ್ಛವವಾಗುವ ರೀತಿಯಲ್ಲಿ ಮುಂದುವರಿಸಿಕೊಂಡು ಬಂದು ಈಗ ಅದನ್ನು ಕೊಲ್ಲು ತ್ತೇವೆ ಅಥವಾ ಅದು ಹೆಣ ಆಗಿದೆ, ಅದನ್ನು ದಫ್ನ ಮಾಡುತ್ತೇವೆ, ನಮಗೆ ಅಧಿಕಾರ ಕೊಡಿ ಎಂದು ಕೇಳಿ ದರೆ .....

ಶ್ರೀ ಕೆ. ಹನುಮಂತಯ್ಯ.—ಹೆಣ ಆದಮೇಲೆ ದಫ್ನ ಮಾಡಬೇಕೇ ಬೇಡವೇ ?

ಶ್ರೀ ಎಸ್. ಗೋಪಾಲಗೌಡ.—ಅದು ನಿಜ. ಹೆಣ ಆದರೆ ದಫ್ನ ಮಾಡುತ್ತೇವೆ, ಅಧಿಕಾರ ಕೊಡಿ ಎಂದು ಮಾನ್ಯ ಸಭೆಯನ್ನು ಕೇಳಿದರೆ ಅದಕ್ಕಿಂತ ವಿಷಾದದ ಸಂಗತಿ ಇರಲಾರದು ಎಂದು ನಾನು ತಿಳಿಯುತ್ತೇನೆ. ಚುನಾಯಿತ ಸದಸ್ಯರಾಗಿರತಕ್ಕ ನಮಗೆ ಸರ್ಕಾರದವರು ಮಾಡತಕ್ಕ ಒಂದು ಅವಮಾನ ಎಂದು ಕೂಡ ನಾನು ಭಾವಿಸುತ್ತೇನೆ. ಅವರು ಜೀವಚ್ಛವವಾಗಿರುವ ಡಿಸ್ಟ್ರಿಕ್ಟ್ ಬೋರ್ಡುಗಳ ಅವಧಿ ಮುಗಿಯುತ್ತದೆ, ಅಧಿಕಾರ ಕೊಡಿ, ನಮಗೆ ಅಧಿಕಾರವಿಲ್ಲ, ಕೈಗಳನ್ನು ಬಲಪಡಿಸಿ ಎಂದು ಕೇಳುತ್ತಾರೆ. ಇದರಲ್ಲಿ ವ್ಯಕ್ತಿಗಳ ಪ್ರಶ್ನೆಯಲ್ಲ. ನಮ್ಮವರು ಅಥವಾ ಬೇರೆಯವರು ಎಂಬ ಪ್ರಶ್ನೆ ಇದರ ಲ್ಲಿಲ್ಲ. ಇಲ್ಲಿರುವುದು ಒಂದು ನೀತಿ. ಒಂದು ಮೂಲ ಭೂತವಾದ ಪ್ರಶ್ನೆಯ ಬಗ್ಗೆ ನಾವು ತೀರ್ಮಾನ ಮಾಡ ಬೇಕಾಗಿದೆ, ಚರ್ಚೆಮಾಡಬೇಕಾಗಿದೆ. ಹೀಗೆಯೇ ಮುಂದುವರಿಸಿಕೊಂಡು ಬಂದರೆ ಎಷ್ಟು ಕಾಲಾವಧಿ ಯಲ್ಲಿ ನರಿಯಾದ ವ್ಯವಸ್ಥೆಯಾಗುತ್ತದೆ ಎಂಬುದನ್ನು ತಾವು ಯೋಚನೆಮಾಡಬೇಕು. ಅವರು ಎಷ್ಟು ಕಾಲ ದಲ್ಲಿ ಪುನರಾಲೋಚನೆ ಮಾಡುವವರಿದ್ದಾರೆಂಬುದು ನಮಗೆ ತಿಳಿಯದು. ಸ್ಪೆಷಲ್ ಆಫೀಸರಿಗೆ ಇಂಥ ಬಂದು ಸ್ಥಳೀಯ ಸಂಸ್ಥೆ ವಹಿಸುತ್ತಾರಲ್ಲ, ಇದನ್ನು ಎಷ್ಟು ಕಾಲದಲ್ಲಿ ಪುನರ್‌ರಚನೆ ಮಾಡುವುದು, ಇದಕ್ಕೆ ಕಾಲಾ ವಧಿಯೆಷ್ಟು ಎಂಬ ಭರವಸೆ ಈ ಮಾನ್ಯ ಸಭೆಗೆ ಕೊಟ್ಟಿ ದ್ದಾರೆಯೆ ಎಂದು ಹೇಳಿದರೆ, ಇಲ್ಲ. ಎಲ್ಲ ಶಬ್ದಗಳನ್ನೂ ಪುನಃಪುನಃ ಓದಿ ನೋಡಿದ್ದಾಯಿತು. Amendment of Section 175 of Mysore Act IV of 1952 ಎಂಬುದರಲ್ಲಿ—

> "(1) Notwithstanding anything contained in this Act,
>
> (i) it shall be lawful for the Government,"

ಎಂದು ಹೇಳಿ, ಎರಡನೆಯದಾಗಿ

> "(*a*) to specify by notification in the *Mysore Gazette* the date on which the term of office of the members of the bodies functioning as the District Boards of the Districts, immediately before the commencement of this Act, shall expire."

ಎಂದರೆ ಅವರನ್ನು ಮುಗಿಸುತ್ತೇವೆ ಎಂದು ನೂಚಿಸಿ ದ್ದಾರೆ. ಆಮೇಲೆ—

> " to appoint with effect from the date specified under sub-clause (*a*) Special Officer, by notification in the *Mysore Gazette* in respect of each District Board, to exercise the powers, discharge the duties and perform the functions of such District Board and its President, until the constitution of such District Board in accordance with the provisions of this Act."

ಎಂದು ಹೇಳಿದ್ದಾರೆ. ಎಲ್ಲಿಯವರೆಗೆ ರಚನೆಯಾಗು ವುದಿಲ್ಲವೋ ಅಲ್ಲಿಯವರೆಗೂ ಅವರು ಮುಂದುವರಿಸಿ ಕೊಂಡು ಹೋಗುತ್ತಾರೆ. ಇನ್ನೂ ಮುಂದೆ—

> " the Government may, if it considers necessary, constitute a committee, consisting of such persons as the Government may nominate, to advise the Special Officer appointed under sub-clause (*b*) of clause (i) in the discharge of his duties."

ಎಂದು ಹೇಳಿರುತ್ತಾರೆ. ಅವರ ಇಷ್ಟ ಬಂದರೆ ಒಂದು ಸಮಿತಿಯನ್ನು ಈ ಸ್ಪೆಷಲ್ ಅಧಿಕಾರಿಗಳಿಗೆ ಅಡ್ವೈಜ್ ಮಾಡುವುದಕ್ಕೆ, ಸಲಹೆ ಕೊಡುವುದಕ್ಕೆ ನೇಮಿಸಬಹುದು.

(ಶ್ರೀ ಎಸ್. ಗೋಪಾಲಗೌಡ)

ಈ ರೀತಿಯಾಗಿ ಅವರು ಬರೆದಿದ್ದಾರೆ. ಈಗ ಹೊಸದಾಗಿ ಶ್ರೀಮತ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಯಾವ ಒಂದು ಸಮಿತಿ ಈ ವಿಷಯವನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಏರ್ಪಾಡಾಗಿದೆಯೋ ಆ ಸಮಿತಿಗೆ ಕೂಡ ಇಷ್ಟೇ ಕಾಲದಲ್ಲಿ ನೀವು ವರದಿಯನ್ನು ಒಪ್ಪಿಸಲೇಬೇಕು ಎಂದು ಕಡ್ಡಾಯವಾದ ನಿಯಮ ವೇನೂ ಇದ್ದಂತೆ ನನಗೆ ಕಂಡು ಬರುವುದಿಲ್ಲ. ಅವಧಿಯ ಮೇರೆಗೆ ಈ ಭಿನ್ನಾಭಿಪ್ರಾಯ ಮುಂದುವರಿದು ಹಾಗೆಯೇ ಇದೆ. ಸಮಿತಿ ತನ್ನ ವರದಿಯನ್ನು ಒಪ್ಪಿಸಿ ಮತ್ತೆ ಪುನಃ ಅದು ಈ ಸಭೆಯ ಮುಂದೆ ಬಂದು ಅದಕ್ಕೆ ಒಮ್ಮತದ ಅಭಿಪ್ರಾಯ ದೊರೆತು ಅದು ಕಾನೂನಾಗಿ, ಅನಂತರದಲ್ಲಿ ಈ ಸ್ಥಳೀಯ ಸಂಸ್ಥೆಗಳ ಪುನರ್ರಚನೆಯಾಗಬೇಕು. ಅಂದರೆ ಬಹುಶಃ ಬಹಳ ವರ್ಷಗಳನ್ನೇ ಇದು ತೆಗೆದುಕೊಂಡೀತು ಎಂದು ನನಗೆ ಭಯವಾಗಿದೆ. ಈ ಭಯವನ್ನು ಅಥವಾ ಅನುಮಾನವನ್ನು ನಿವಾರಣೆ ಮಾಡುವುದಕ್ಕೆ ಈ ತಿದ್ದುಪಡಿಯಲ್ಲಿ ಅಥವಾ ಹೊರಗಡೆ ಯಾವ ಒಂದು ಭರವಸೆಯೂ ಇಲ್ಲ; ಆ ಭರವಸೆಯನ್ನು ಕೊಡುವ ಯಾವ ಒಂದು ಹೇಳಿಕೆಯೂ ಇಲ್ಲ. ಅಲ್ಲದೆ ಕಳೆದ ವರ್ಷ ರಾಜ್ಯಪ್ರಮುಖರ ಭಾಷಣದಲ್ಲೇ "ನಾವು ಈ ವರ್ಷದ ಅವಧಿಯೊಳಗಾಗಿ ಈ ಬೋರ್ಡುಗಳಿಗೆ ಚುನಾವಣೆಯನ್ನು ಮಾಡುತ್ತೇವೆ" ಎಂದು ಹೇಳಲಾಗಿತ್ತು. ಇಂತಹ ಒಂದು ಆಶ್ವಾಸನವೇ ಈಡೇರದೆ ಹೋದಮೇಲೆ ಇನ್ನು ಮುಂದೆ ಇದು ಏನಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಸರ್ಕಾರದವರು ಇದನ್ನು ಸಕಾಲದಲ್ಲಿ ಪುನರ್ರಚನೆ ಮಾಡುವುದಕ್ಕೆ ನಾನಾ ಅಡ್ಡಿ ಆತಂಕಗಳು ಬಂದಿರಬಹುದು, ಎಂದು ಒಪ್ಪಿಕೊಂಡರೂ ಕೂಡ ಇದರ ಹಿನ್ನೆಲೆಯಲ್ಲಿ ಏನಾದರೂ ರಾಜಕಾರಣ ಇರಬಹುದೇ ಎಂದು ಹೇಳಿ ನಾವು ಭಯಪಡಬೇಕಾಗಿದೆ. ಇದರಲ್ಲಿ ಹಿಟ್ಲರ್ ಶಾಹಿಯ ಕೈವಾಡದಿಂದ ಈ ಸ್ಥಳೀಯ ಸಂಸ್ಥೆಗಳ ಚುನಾವಣೆ ನಿಧಾನವಾಗಿ ಒಂದಲ್ಲ ಒಂದು ಕಾರಣ ಮುಂದುವರಿದು ಇವುಗಳನ್ನು ಹೊಡೆದುಹಾಕಿ ತಾನೇ ತಾನಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕೆಂಬ ಉದ್ದೇಶವನ್ನು ಹಿನ್ನೆಲೆಯಲ್ಲಿ ಇಟ್ಟುಕೊಂಡಿದ್ದಾರೆಯೆ ಎಂದು ಯೋಚನೆ ಮಾಡುವುದಕ್ಕೂ ಇಲ್ಲಿ ಅವಕಾಶವಾಗಿದೆ. ಆದ್ದರಿಂದ ಪ್ರಭುತ್ವದ ಹೆಸರಿನಲ್ಲಿ ಸ್ಥಳೀಯ ಸಂಸ್ಥೆಗಳು, ಸ್ವರಾಜ್ಯ, ಸೆಲ್ಫ್ ಗವರ್ನ್‌ಮೆಂಟ್ ಎಂದೇನು ನಾವು ಒಪ್ಪಿಕೊಂಡಿದ್ದೇವೋ ಆ ತತ್ವಗಳನ್ನು ಕಿಂಚಿತ್ತಾದರೂ ಕಾರ್ಯ ರೂಪದಲ್ಲಿ ತೋರ್ಪಡಿಸುವುದಕ್ಕೆ, ಕಾರ್ಯ ರೂಪದಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಒಂದೇ ಒಂದು ಮಾರ್ಗವೇ ನೆಂದರೆ, ತಕ್ಷಣ ಈಗಿರತಕ್ಕಂಥ ರೀತಿಯಲ್ಲಿ ಕಾಲ ವಿಳಂಬ ಮಾಡದೆಯೇ ಜಿಲ್ಲಾ ಬೋರ್ಡುಗಳನ್ನು ಪುನರ್ರಚನೆ ಮಾಡತಕ್ಕದ್ದು. ಏಕೆಂದರೆ ಜಿಲ್ಲಾ ಬೋರ್ಡುಗಳಲ್ಲಿ, ಈಗಾಗಲೇ ಅವು ತಮ್ಮ ಕೊನೆಯ ಅವಧಿಯಲ್ಲಿಯಲ್ಲಿರುವುದರಿಂದ, ಅವರಿಗಿದ್ದ ಅಧಿಕಾರ ಮತ್ತು ಹಣ ಕುಂಠಿತವಾಗಿ ಅನೇಕ ಕೆಲಸಕಾರ್ಯಗಳು ನಿಂತು ಹೋಗಿವೆ. ಅವರಿಗೆ ತಮ್ಮ ಅಧಿಕಾರ ಎಲ್ಲಿ ಯಾವಾಗ ಕೊನೆಯಾಗುತ್ತದೆಂಬುದೇ ಗೊತ್ತಿಲ್ಲದುದರಿಂದ ಈಗ ಎರಡು ವರ್ಷಗಳಿಂದ ಅನೇಕರು ಯಾವ ಕೆಲಸವನ್ನೂ ಹೆಚ್ಚು ಜವಾಬ್ದಾರಿಯಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇನ್ನೇನು ಕೊನೆಯಾಗುತ್ತಾ ಬಂತು ಎಂದು ಹೇಳಿ ಈ ರೀತಿಯ ಅಭಿಪ್ರಾಯ ಅಥವಾ ಭಾವನೆ ಅವರಿಗೆ ಬರುವುದು ಸಹಜ. ಈ ರೀತಿಯಾಗಿ ಅಲ್ಲರತಕ್ಕಂಥ ಫಂಡ್ಸ್ ಮತ್ತು ಅಲ್ಲಿ ಆಗಬೇಕಾಗಿದ್ದಂಥ ಕಾಂಗಾರಿಗಳು ಮತ್ತು ಇತರ ಕೆಲಸಕಾರ್ಯಗಳು ಎಷ್ಟು ನಡೆಯದೆ ನಿಂತು ಹೋಗಿವೆ, ಈ ಕಾನೂನಿನಿಂದ ಇಡೀ ಸಂಸ್ಥಾನದಲ್ಲಿ ಎಷ್ಟು ಮಟ್ಟಿನ ಪ್ರಗತಿಯಾಗಬಹುದು ಮತ್ತು ಜನರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳುಳ್ಳ ಒಂದು ಸಂಸ್ಥೆಯನ್ನು ಈ ರೀತಿಯಾಗಿ ಹೊಡೆದುಹಾಕುವುದು ನ್ಯಾಯವೇ, ಇದರ ಜಾಗದಲ್ಲಿ ಅಧಿಕಾರಿಗಳೊಬ್ಬರನ್ನು ನೇಮಿಸಿದರೆ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬಲ್ಲರೆ ಎಂಬುದನ್ನು ಯೋಚನೆಮಾಡಬೇಕಾದದ್ದು ಆವಶ್ಯಕ. ಪರಿಸ್ಥಿತಿ ಹೀಗಿರುವುದರಿಂದ ಇಂಥ ಒಂದು ದೊಡ್ಡ ಸಂಸ್ಥೆಯನ್ನು, ಸದಾ ಕಾಲದಲ್ಲೂ ಕೆಲಸ ಮಾಡುವ ಒಬ್ಬ ಅಧ್ಯಕ್ಷರು ನೋಡಿಕೊಳ್ಳುತ್ತಿದ್ದ ಜವಾಬ್ದಾರಿಯುತವಾದ ಸಂಸ್ಥೆಯನ್ನು, ಒಬ್ಬರು ಅಧಿಕಾರಿಗಳಿಗೆ ವಹಿಸುವುದು ಒಳ್ಳೆಯದಲ್ಲ. ಆದ್ದರಿಂದ ಪುನಃ ಪರಿಶೀಲನೆಮಾಡಿ, ಎಲ್ಲಿಯತನಕ ಸ್ಥಳೀಯ ಸಂಸ್ಥೆಗಳನ್ನು ಪುನರ್ರಚನೆ ಮಾಡಲು ಕಾನೂನು ಕಾಯಿದೆಗಳು ತಯಾರಾಗುವುದಿಲ್ಲವೋ, ಅನುಕೂಲ ಪೊದಗುವುದಿಲ್ಲವೋ, ಅಲ್ಲಿಯತನಕ ಬರೀ ಡಿಸ್ಟ್ರಿಕ್ಟ್ ಬೋರ್ಡುಗಳನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶಮಾಡಬೇಕು. ಇದಕ್ಕಾಗಿ ಸರ್ಕಾರದವರು ಯಾವ ತಿದ್ದುಪಡಿ ಮನೂದೆಯನ್ನು ಈ ಸಭೆಯ ಮುಂದಿಟ್ಟಿದ್ದಾರೋ ಅದನ್ನು ಅವರು ಒಂದು ದೊಡ್ಡ ಮನಸ್ಸುಮಾಡಿ ವಾಪಸು ತೆಗೆದುಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಅನಂತರಾಮ್(ಚಾಮರಾಜಪೇಟೆ).— ಈ ವಿಚಾರವಾಗಿ ವಿರೋಧಪಕ್ಷದ ಮೂರು ನಾಲ್ಕು ಮಂದಿ ಸದಸ್ಯರು ಈಗಾಗಲೇ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀ ಮಹಮ್ಮದ್ ಇಮಾಂರವರು, ಈ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ವಜಾ ಮಾಡುವುದು ಸರಿಯಲ್ಲ, ಹಾಗೆ ವಜಾ ಮಾಡಿ ಇದರ ಆಡಳಿತವನ್ನು ಒಬ್ಬ ಅಧಿಕಾರಿಯ ಕೈಗೆ ವಹಿಸುವುದೆಂದರೆ ಮತ್ತೂ ಸರಿಯಲ್ಲ, ಈ ಡಿಸ್ಟ್ರಿಕ್ಟ್ ಬೋರ್ಡ್‌ಗಳ ವಿಚಾರದಲ್ಲಿ ಸರ್ಕಾರದವರು ಒಂದೇ ವಿಧವಾದ ನೀತಿಯನ್ನು ಅಥವಾ ಧೋರಣೆಯನ್ನು ಅನುಸರಿಸಿಲ್ಲವೆಂದು ಹೇಳಿದರು. ಡಿಸ್ಟ್ರಿಕ್ಟ್ ಬೋರ್ಡ್‌ಗೆ ಸಂಬಂಧಪಟ್ಟ ಶಾಸನ ಮಾಡಿರತಕ್ಕವರು ಹಿಂದಿನ ಸರ್ಕಾರದವರು. ಈಗಿನ ಸರ್ಕಾರವಲ್ಲ. ಆಗಲೂ ಕಾಂಗ್ರೆಸ್ ಸರ್ಕಾರವೇ ಇದ್ದಿರಬಹುದು. ಆದರೆ ಆ ಶಾಸನವಾದುದು ನಾವುಗಳೆಲ್ಲರೂ ಚುನಾವಣೆ ಆಗುವುದಕ್ಕೆ ಹಿಂದೆ ಈಗ ಕಾಲಧರ್ಮಕ್ಕೆ ಅನುಗುಣವಾಗಿ ಮಾರ್ಪಾಡು ಅತ್ಯವಶ್ಯಕವಾಗಿ ಆಗಬೇಕಾಗಿದೆ. ಉದಾಹರಣೆಯಾಗಿ, ಡಿಸ್ಟ್ರಿಕ್ಟ್ ಬೋರ್ಡಿಗೆ ನಮನ್ಯರನ್ನು ಚುನಾವಣೆ ಮಾಡತಕ್ಕ ರೀತಿ ನರಿಯಾಗಿಲ್ಲ, ಅದು ಪರೋಕ್ಷವಾಗಿದೆ, ಪ್ರತ್ಯಕ್ಷವಾಗಿಲ್ಲ ಎಂಬ ಅಭಿಪ್ರಾಯ ಪ್ರತಿನಿಧಿ ಸದಸ್ಯರಲ್ಲಿ ಮೂಡುವುದು ಸಹಜವಾದುದು. ಹೀಗೆಯೇ ವಿರೋಧ ಪಕ್ಷದ ಸದಸ್ಯರೂ ಅಭಿಪ್ರಾಯವುಳ್ಳವರಾಗಿದ್ದಾರೆ. ಇದಕ್ಕಾಗಿ ಸರ್ಕಾರದವರು ನಮ್ಮ ಅಭಿಪ್ರಾಯಗಳನ್ನು ತಿಳಿದುಕೊಂಡು ಇರುವುದು ನ್ಯಾಯವಾಗಿದೆ. ಏಕೆಂದರೆ ವಯಸ್ಕರ ಮತದಾನ ಪದ್ಧತಿಯಮೇರೆಗೆ ಸದಸ್ಯ ಚುನಾವಣೆಯಾದರೆ ಅಂಥ ಸದಸ್ಯರಿರುವ ಸಂಸ್ಥೆಗೆ ಹೆಚ್ಚಿನ ಜನ ಬೆಂಬಲವಿದೆಯೆಂಬುದು ವ್ಯಕ್ತಪಡುತ್ತದೆಂದು ತಿಳಿದು ಒಂದು ತಿದ್ದುಪಡಿ ರೂಪವಾಗಿ ಶಾಸನ ತಂದರು. ಶಾಸನ ತಂದಾಗ ಪ್ರತ್ಯಕ್ಷ ಚುನಾವಣೆಯ ಮಾರ್ಗವೇ ಇರಬೇಕೇ ಎಂಬ ವಿಚಾರದಲ್ಲಿ ತರ್ಕವಾ

ಯಿತು. ಆ ಸಮಯದಲ್ಲಿ ವಿರೋಧ ಪಕ್ಷದ 'walk-out' ಸಹ ಆಯಿತು. ಆಮೇಲೆ ಚುನಾವಣೆಗೆ ಸಿದ್ಧವಾಗಿರುವಾಗ ಮದ್ರಾಸಿನಲ್ಲಿ ಒಂದು ಕಾನೂನಾಯಿತು. ಮದ್ರಾಸಿನಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾರ್ಯಕ್ರಮವನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅಲ್ಲಿ ಈ ಡಿಸ್ಟ್ರಿಕ್ಟ್ ಬೋರ್ಡ್ ಇರುವುದು ಸರಿಯಾಗಿಲ್ಲ, ಇದರಿಂದ ಆಯಾ ಡಿಸ್ಟ್ರಿಕ್ಟಿನ ಪೂರ್ಣ ಕುಂದು ಕೊರತೆಗಳ ನಿವಾರಣೆಗೆ ಅನಾನುಕೂಲವಾಗುತ್ತಿದೆ, ಆಯಾ ಡಿಸ್ಟ್ರಿಕ್ಟ್ ಬೋರ್ಡ್‌ನ ಸದಸ್ಯರು ಅವರವರ ಡಿಸ್ಟ್ರಿಕ್ಟಿನ ಅನುಕೂಲಗಳಿಗೆ ಮಾತ್ರ ಹೆಚ್ಚಿನ ನಿಗಾ ಕೊಡುತ್ತಾರೆಯೇ ಹೊರತು ಡಿಸ್ಟ್ರಿಕ್ಟ್‌ನ ಪ್ರತಿಯೊಂದು ಪ್ರದೇಶದಲ್ಲಿನ ಅನುಕೂಲತೆಗಳಿಗೆ ಅಷ್ಟಾಗಿ ನಿಗಾ ಕೊಡುವುದಿಲ್ಲ, ಆದಪ್ರಯುಕ್ತ ಡಿಸ್ಟ್ರಿಕ್ಟ್ ಬೋರ್ಡಿಗೆ ಬದಲು ತಾಲ್ಲೂಕು ಬೋರ್ಡ್ ಇರುವುದೇ ಲೇಸು ಎಂಬ ನಿರ್ಧಾರಕ್ಕೆ ಬಂದರು: ಈ ನಿರ್ಧಾರ ಸರಿಯಾದುದೆಂದು ನಮ್ಮ ಸಂಸ್ಥಾನದ ಅನುಭವಸ್ಥರೂ ಸಹ ಅಭಿಪ್ರಾಯಪಟ್ಟು ಸರ್ಕಾರಕ್ಕೆ ಸಲಹೆಯಿತ್ತರು. ಆ ಸಲಹೆಗೆ ಅನುಗುಣವಾಗಿ, ತಾಲ್ಲೂಕು ಬೋರ್ಡ್ ಸ್ಥಾಪನೆಯಾಗುವುದು ಒಳ್ಳೆಯದು, ಆ ತಾಲ್ಲೂಕು ಬೋರ್ಡ್‌ಗಳಿಗೆ ಪ್ರತಿನಿಧಿ ಚುನಾವಣೆ ವಯಸ್ಕರ ಮತದಾನ ಪದ್ಧತಿಯ ಮೇರೆಗೆ ಆಗುವುದು ಒಳ್ಳೆಯದೆಂಬ ಅಭಿಪ್ರಾಯಕ್ಕೆ ನಮ್ಮ ಸರ್ಕಾರದವರು ಬಂದರು. ಇದಕ್ಕೆ ಅನುಗುಣವಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿರುತ್ತಾರೆ. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿರುತ್ತಾರೆ. ಆದಷ್ಟು ಜಾಗ್ರತೆಯಾಗಿ ಆ ಸಮಿತಿಯವರು ವರದಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಆ ಸಮಿತಿಯ ಕಾರ್ಯಕಲಾಪ ಈಗ ಬರುಸಿನಿಂದ ಆಗುತ್ತಿದೆ.

ಈಗಿರುವ ಡಿಸ್ಟ್ರಿಕ್ಟ್ ಬೋರ್ಡುಗಳು 7–8 ವರ್ಷಗಳಿಂದಲೂ ನಡೆದುಕೊಂಡು ಬರುತ್ತಿವೆ. ಆದರೂ ಅವುಗಳಿಗೆ ವಯಸ್ಕರ ಮತದಾನ ಪದ್ಧತಿ ಅನ್ವಯವಾಗಿಲ್ಲ. ಈ ರೀತಿ 7-8 ವರ್ಷಗಳಕಾಲ ಅದೇ ಅಧ್ಯಕ್ಷರೂ, ಅದೇ ಸದಸ್ಯರೂ ಕುಳಿತು ಕೆಲಸಕಾರ್ಯ ನಿರ್ವಹಿಸುವುದೆಂದರೆ ಅದು ಸಮರ್ಪಕವಾದ ವ್ಯವಸ್ಥೆಯಲ್ಲ. ಈಗಿನ ವಾತಾವರಣಕ್ಕೆ ಹೊಂದಿಕೊಂಡು ಎಲ್ಲ ಸಂಸ್ಥೆಗಳೂ ವಯಸ್ಕರ ಮತದಾನ ಪದ್ಧತಿಯನ್ನು ಅನುಸರಿಸಿರುವಾಗ, ಇಲ್ಲಿ ಮಾತ್ರ ಪೂರ್ವ ಕಾಲದ ಪದ್ಧತಿಯ ಅನುಸರಣೆ ಸರಿಯಲ್ಲ. ಜೀವಚ್ಛವವಾಗಿರುವ ಈ ಸಂಸ್ಥೆ ಇರುವುದು ಸರಿಯಲ್ಲ. ಇದನ್ನು ವಜಾ ಮಾಡುವುದು ನ್ಯಾಯವೆಂದು ತಿಳಿದುಕೊಂಡು ನಮ್ಮ ಸರ್ಕಾರದವರು ಸಕಾಲದಲ್ಲಿ ಈ ಬಿಲ್ಲನ್ನು ತಂದಿರುತ್ತಾರೆ. ಇದಕ್ಕಾಗಿ ಎದುರಾಳಿಗಳು ಇಷ್ಟೊಂದು ಗರಾಟೆ ಮಾಡುವಂಥದು ಸೂಕ್ತವಾದುದಲ್ಲ. ಜೀವಚ್ಛವವಾಗಿರುವ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ಇನ್ನುಮುಂದೆಯೂ ನಮ್ಮ ಸರ್ಕಾರ ನಡೆಸಿಕೊಂಡು ಹೋದರೆ ಇತರರು ನಮ್ಮನ್ನು ನೋಡಿ ನಗುತ್ತಾರೆ.

ಎದುರಾಳಿಗಳಲ್ಲಿ ಕೆಲವರಿಗೆ ಇನ್ನೊಂದು ಶಂಕೆ ಉಂಟಾದುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಈ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ವಜಾಮಾಡಿ, ಇದರ ಆಡಳಿತವನ್ನು ಬೇರೊಬ್ಬ ಅಧಿಕಾರಿಯ ಕೆಳಗೆ ಅನಿರೀಕ್ಷಿತ ಕಾಲಕೊಟ್ಟುಬಿಡುತ್ತಾರಲ್ಲ ಎಂದು. ಆ ರೀತಿ ಶಂಕಿಸಬೇಕಾದಪ್ರಮೇಯವಿಲ್ಲ. ಇದಕ್ಕಾಗಿಯೇ ಒಂದು ಸಮಿತಿ ನೇಮಕವಾಗಿರುವುದು. ಆ ಸಮಿತಿ ಬೇಗ ತನ್ನ ವರದಿಯನ್ನು ಕೊಡುತ್ತದೆ. ಆದಷ್ಟು ಬೇಗ ಚುನಾವಣೆ ನಡೆಸಿ ಆ ಅಧಿಕಾರವನ್ನು ಪುನಃ ಸಂಬಂಧಪಟ್ಟ ಸಂಸ್ಥೆಯ ಅಧ್ಯಕ್ಷರು ವಹಿಸಿಕೊಳ್ಳುತ್ತಾರೆ. ಇದಕ್ಕೆ ಕಾಲ ಬಹಳ ಸನ್ನಿಹಿತವಾಗಿದೆ. ಇದಕ್ಕೇನೂ ಹೆದರಬೇಕಾಗಿಲ್ಲ. ಈಗಲೂ ಮುನಿಸಿಪಾಲಿಟಿಗಳ ಚುನಾವಣೆ ಆಗತಕ್ಕ ಸಮಯದಲ್ಲಿ ಅಲ್ಲಿಯ ಮುನಿಸಿಪಾಲಿಟಿಯ ಅಧಿಕಾರವನ್ನು ಡೆಪ್ಯುಟಿ ಕಮೀಷನರ್ ಅಥವಾ ಅಮಲ್ದಾರರು ವಹಿಸಿಕೊಳ್ಳುತ್ತಾರೆ; ಚುನಾವಣೆ ಆದಮೇಲೆ ಆ ಅಧಿಕಾರವನ್ನು ಸಂಬಂಧಪಟ್ಟವರಿಗೆ ಪುನಃ ವಹಿಸಿಕೊಡುತ್ತಾರೆ. ಇದು ಸರ್ವೇ ಸಾಧಾರಣವಾಗಿ ನಡೆದುಕೊಂಡು ಬಂದಿರತಕ್ಕ ಪದ್ಧತಿ. ಕೆಲವು ಅಧಿಕಾರಿಗಳಿಗೆ ಅಧಿಕಾರವಹಿಸಿಕೊಡುವುದು ನ್ಯಾಯಬದ್ಧವಾದುದು. ಅದಕ್ಕೆ ಒಂದು ಬಣ್ಣ ಕಟ್ಟಿ ಖಾಸಗಿ ಮನುಷ್ಯರಿಗಿದ್ದ ಅಧಿಕಾರವನ್ನು ಕಿತ್ತು ಆ ಅಧಿಕಾರಿಗಳಿಗೆ ಅಧಿಕಾರ ಕೊಡುವುದು ನ್ಯಾಯವಲ್ಲವೆಂದು ಹೇಳಬಾರದು. ಈ ರೀತಿ ಅಧಿಕಾರವನ್ನು ಯಾವಾಗಲೂ ಕೊಡಬೇಕಾಗಿಲ್ಲ. ಸ್ವಲ್ಪಕಾಲ ಮಾತ್ರ ಕೊಡಬೇಕಾಗುತ್ತದೆ. ಇದು ಏನಿದ್ದರೂ ಒಂದು ತಾತ್ಕಾಲಿಕ ವ್ಯವಸ್ಥೆ.

ಇನ್ನು ಕೆಲವು ಸದಸ್ಯರು ಹೇಳಿದರು, ಈಗಿರುವ ಶಾಸನ ಬದ್ಧ ರೀತಿಯಲ್ಲಿ ಚುನಾವಣೆ ನಡೆಯದಿದ್ದರೆ ಡಿಸ್ಟ್ರಿಕ್ಟಿನ ಪ್ರಾಮುಖ್ಯತೆ ಹೊರಟುಹೋಗುತ್ತದೆ. ಆದ ಕಾರಣ ಮೊದಲು ಅದರಂತೆ ಚುನಾವಣೆ ನಡೆಸಿ, ಅದರಲ್ಲಿ ಲೋಪ ದೋಷಗಳು ಕಂಡುಬಂದರೆ ಬದಲಾಯಿಸಿ ಎಂದು. ಇದು ಸಮರ್ಪಕವಾದ ವಾದವಲ್ಲ. ಒಂದು ಸಲ ಚುನಾವಣೆ ನಡೆಸಿದಮೇಲೆ ಅದರ ಆಗುಹೋಗುಗಳ ಪರಿಸ್ಥಿತಿಯ ಅರಿವಾಗಬೇಕಾದರೆ ನಾಲ್ಕು ವರ್ಷಗಳು ಕಾಯಬೇಕಾಗುತ್ತದೆ. ಅದಕ್ಕಾಗಿ ಆದಷ್ಟು ಬೇಗ ನಿವಾರಣಾ ಮಾರ್ಗವನ್ನು ಕಲ್ಪಿಸುವುದಕ್ಕಾಗಿಯೇ ಸರ್ಕಾರದವರು ಈ ರೀತಿಯ ವ್ಯವಸ್ಥೆಯನ್ನು ಕೈಕೊಳ್ಳಬೇಕೆಂದು ಉದ್ದೇಶಿಸಿದ್ದಾರೆ.

ಶ್ರೀ ಕೆ. ಪಟ್ಟಾಭಿರಾಮ್ಮರವರು, ಈಗಿರುವ ಡಿಸ್ಟ್ರಿಕ್ಟ್ ಬೋರ್ಡ್‌ಗಳನ್ನು ರದ್ದುಗೊಳಿಸಿ, ಈ ಅಧಿಕಾರವನ್ನು ಒಬ್ಬ ಅಧಿಕಾರಿಯ ವಶಕ್ಕೆ ಒಪ್ಪಿಸಿ ಆತನ ಕೈಕೆಳಗೆ ಒಂದು ಅಡ್ವೈಜರಿ ಸಮಿತಿ ಏರ್ಪಡಿಸಿರುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. ಇದರಿಂದ ಏನೂ ಅನರ್ಥವಾಗುವುದಿಲ್ಲ. ಅದೂ ಅಲ್ಲದೆ, ಇದು ಒಂದು ತಾತ್ಕಾಲಿಕ ವ್ಯವಸ್ಥೆ ಮಾತ್ರ. ಜೀವಚ್ಛವವಾಗಿರುವ ಈಗಿರುವ ಡಿಸ್ಟ್ರಿಕ್ಟ್ ಬೋರ್ಡ್‌ಗಳು have lost their representative character' ಎಂಬ ಅಭಿಪ್ರಾಯವನ್ನು ಅವರು ಉಳ್ಳವರಾಗಿರುವಾಗ ಈ ತಾತ್ಕಾಲಿಕ ವ್ಯವಸ್ಥೆಗೆ ಏಕೆ ಶಂಕಿಸಬೇಕು? ಈ ವ್ಯವಸ್ಥೆಯಿಂದ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ.

5 P. M.

ಈ ರೀತಿಯಾಗಿ ಮಾಡಿರುವುದು ಸರಿ ಎಂದು ಕಾಣುತ್ತದೆ. ಇನ್ನೂ ಈ ಬಿಲ್ಲಿನ ವಿಷಯದಲ್ಲಿ ಒಂದು ಶಂಕೆ ಇದೆ. ಚುನಾವಣೆ ಆಗಲು ಇನ್ನೂ ಒಂದೆರಡು ವರ್ಷಗಳಾಗುತ್ತದೆ ಅಲ್ಲಿಯವರೆಗೂ ,ಅಧಿಕಾರಿಗಳ ವಶಕ್ಕೆ ಬಿಡುವುದು ಸರಿಯಲ್ಲ ಎಂದು. ಅಂಥ ಶಂಕೆಗೆ ಅವಕಾಶವಿಲ್ಲ ಎಂದು ನನ್ನ ಮನಸ್ಸಿಗೆ ಹೊಳೆಯುತ್ತದೆ. ಆದಷ್ಟುಬೇಗ ಬೇರೆ ಒಂದು ಶಾಸನ ಬಂದು ಚುನಾವಣೆಗಳು ನಡೆದು ನಮ್ಮ ಖಾಸಗೀ ಸದಸ್ಯರು ಕೆಲಸ ಮಾಡುವುದಕ್ಕೆ ಅವಕಾಶವಿರುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಹೆಚ್ಚು ಹೇಳಲಕ್ಕೆ ಇಷ್ಟಪಡುವುದಿಲ್ಲ. ನಮ್ಮ ಸ್ನೇಹಿತರು ಮಾತನಾಡುವಾಗ ಸರ್ಕಾರ ಈ ರೀತಿ ಮಾಡತಕ್ಕದ್ದು ಸರಿಯಲ್ಲ, ಇದು 'retrograde' 'undemocratic' ಎಂದು ಹೇಳಿದರು. ಇದು ಸರಿ

(ಶ್ರೀ ಆರ್. ಅನಂತರಾಮಯ್ಯ)

ಇಲ್ಲ. ಏಕೆಂದರೆ ಸರ್ಕಾರ ಕೆಲಸ ಮಾಡುತ್ತಿರುವುದು democratic principles ಮೇಲೆ. ವಾಸ್ತವವಾಗಿ ನಮ್ಮ ಸರ್ಕಾರದವರು ಆದಷ್ಟು ಬೇಗ ಇದಕ್ಕೆ ಸಂಬಂಧಪಟ್ಟ ಬೇರೆ ಒಂದು ಶಾಸನ ತಂದು ಈ ಸಭೆಯ ಅನುಮತಿ ಪಡೆದು ಜಾಗ್ರತೆ ಚುನಾವಣೆ ನಡೆಸಿ ಪುನಃ ಖಾಸಗಿಯವರಿಗೇ ಹೆಚ್ಚು ಅಧಿಕಾರ ಕೊಡುತ್ತಾರೆ ಎಂದು ನಂಬಿ ನಾನು ಈ ಮನೂದೆಗೆ ನನ್ನ ಬೆಂಬಲ ಕೊಡುತ್ತೇನೆ.

(A number of members rose).

Sri K. HANUMANTHAIYA (Leader of the House).—Sir, since there are a very large number of Members who wish to speak, I may propose, for the convenience of the House, this procedure. There are other short Bills which may be taken up tomorrow morning and disposed of.

Sri KADIDAL MANJAPPA.—There is one other Bill relating to Bellary District; that does not take much time.

Sri K. HANUMANTHAIYA.—The Legislative Council must have some work, and therefore if you pass those Bills now, we can continue this Bill on the next day.

Mr. SPEAKER.—So we will have this Bill for further debate on the 15th and before this Bill is taken up, other short Bills may be disposed of.

Sri J. MOHAMED IMAM.—Sir, 15th is the day on which the Rajpramukh's Address is fixed for debate. This is a Bill which, I am sure, takes a long time. It looks as though there are a large number of speakers and if this Bill is taken up then another day will have to be allotted for the Rajpramukh's Address.

Sri K. HANUMANTHAIYA.—We will consider that afterwards. These small Bills must be passed first; otherwise, there will be no work for the Legislative Council.

Mr. SPEAKER.—The House will now rise for the day and meet at 12 NOON on the 15th.

The House adjourned at Five Minutes past Five of the Clock to meet again at Twelve of the Clock on Friday, the 15th January 1954.